XIII. ಶ್ರೀ ಜಿ. ಪರಮೇಶ್ವರ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) ಅವರು:

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 8(9)ರ ಪ್ರಕರಣದ ಮೇರೆಗೆ

ಗುಲ್ಬರ್ಗಾ ವಿಶ್ವವಿದ್ಯಾಲಯದ ಸಮಾಜ ಕಾರ್ಯ ಅತಿಥಿ ಉಪನ್ಯಾಸಕರಾದ ಶ್ರೀ ಕೆ.ಎಸ್. ಮಾಲಿ ಪಾಟೀಲರ ಅಕ್ರಮ ನೇಮಕಾತಿಯನ್ನು ರದ್ದು ಮಾಡಿ ದಿನಾಂಕ: 17-11-2000 ರಂದು ಹೊರಡಿಸಲಾದ ಇಡಿ 11 ಯುಜಿವಿ 2000ನೇ ಸಂಖ್ಯೆಯ ಆದೇಶವನ್ನು ಮಂಡಿಸುವುದು.

ಅಧ್ಯಕ್ಷರು: ಮಂಡಿಸಲಾಯಿತು.

3. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಪ್ರಭಾಕರ ಬಂಗೇರ: (ಬೆಳ್ತಂಗಡಿ) ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಅರ್ಜಿಗಳನ್ನು ತಮ್ಮ ಅನುಮತಿ ಪಡೆದು ಸಭೆಯ ಮುಂದೆ ಮಂಡಿಸುತ್ತೇನೆ.

ಅ. ಬೆಳ್ತಂಗಡಿ ತಾಲ್ಲೂಕು ಅಂಡಿಂಜೆಜೆ ನಲ್ಲಿಂಗೇರಿ ರಸ್ತೆಯನ್ನು ಡಾಂಬರೀಕರಣಗೊಳಿಸುವ ಬಗ್ಗೆ.

ಆ. ಬೆಳ್ತಂಗಡಿ ತಾಲ್ಲೂಕು ಬಂಟಾರು-ಕುಂಟಾಲಪಲ್ಕೆ ಹಾಗೂ ಕುಂಟಾಲಪಲ್ಕೆ ನೋಣಕುವೇರಿ ರಸ್ತೆಯ ಮಧ್ಯದಲ್ಲಿರುವ ಬೊಳ್ಳೆಯ ಬಳಿ ಬೆಳ್ತಂಗಡಿ ಹೊಳೆಗೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ.

ಇ. ಬೆಳ್ತಂಗಡಿ ತಾಲ್ಲೂಕು ಅರಂಬೋಡಿ ಗ್ರಾಮದ ಬೈಲಕಂಡದ ಪರಂಬೋಕು ತೋಡಿಗೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ.

ಈ. ಬೆಳ್ತಂಗಡಿ ತಾಲ್ಲೂಕು ಕೊಕ್ಕಡ ಗ್ರಾಮದ ಬಳಿಯಿಂದ ಪುತ್ಯೆ ಹೊಳೆಗೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ.

ಅಧ್ಯಕ್ಷರು: ಅರ್ಜಿಗಳನ್ನು ಸಭೆಯ ಮುಂದೆ ಒಪ್ಪಿಸಲಾಯಿತು.

ಪ್ರಸ್ತಾಪ

4. ವಿಧಾನಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ

ಶ್ರೀ ಡಿ.ಬಿ. ಚಂದ್ರೇಗೌಡ: (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 293ರ ತರುವಾಯ ಇಲಾಖಾ ವಿಷಯ ಸಮಿತಿಗಳಿಗೆ ಸಂಬಂಧಪಟ್ಟಂತೆ ನಿಯಮ 293ರಿಂದ 300ರವರೆಗೆ ಹೊಸ ನಿಯಮಗಳನ್ನು ಸೇರ್ಪಡೆಗೆ ಸಂಬಂಧಪಟ್ಟ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ."